ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

*ಸಾಹಿತಿಗಳ ಭಾಷಣಕ್ಕೂ, ರಾಜಕಾರಣಿಗಳ ಭಾಷಣಕ್ಕೂ ಇರುವ ವ್ಯತ್ಯಾಸವೇನು?*



ಒಂದರಲ್ಲಿ ನೈತಿಕತೆ ಇರುತ್ತದೆ, ಇನ್ನೊಂದರಲ್ಲಿ ಬರೀ ಕತೆ.

ಕೆ. ಶ್ರೀನಿವಾಸರಾವ್, ಹರಪನಹಳ್ಳಿ

*ಹೆಣ್ಣನ್ನು ಚಂದಿರವದನೆ ಎನ್ನುತ್ತಾರೆ, ಸೂರ್ಯವದನೆ ಎಂದೇಕೆ ಅನ್ನಬಾರದು?*

ಚಂದಿರವದನೆ ಎಂದು ಕರೆದೂ ಇಷ್ಟು ಸಿಟ್ಟು, ಸೆಡವು ಇರುವಾಗ ಸೂರ್ಯವದನೆ ಎಂದರೆ... ಅಯ್ಯಯ್ಯೋ, ಅಕಟಕಟಾ!

ಎಚ್.ಆರ್. ದೇಸಾಯಿ, ರಾಯಚೂರು

*ಮದುವೆಯಾದವನು ಹೆಂಡತಿ-ಮಕ್ಕಳನ್ನು ಸಲಹುತ್ತಾನೆ. ಮದುವೆಯೇ ಆಗದವನು ಯಾರನ್ನು ಸಲಹುತ್ತಾನೆ?*

ಹೋಟೆಲ್, ಬಾರ್, ಕಾಫಿಬಾರ್, ದರ್ಶಿನಿ, ಥಿಯೇಟರ್, ಸಿಗರೇಟ್ ಕಂಪನಿ, ಇತರರ ಹೆಂಡತಿ, ಇತರರ ಮಕ್ಕಳು...

ವೈ.ಜಿ. ನರಸಿಂಹನ್, ಶಿವಮೊಗ್ಗ

*ಮಾತಿಗಿಂತ ಲೇಖನಿ ಹೆಚ್ಚು ಹರಿತ ಅಂತಾರಲ್ಲಾ...?*



ನಿಜ. ಬರೆಯುವಾಗ ಕೆಲವೊಮ್ಮೆ ಪೇಪರ್ ಹರಿದುಹೋಗುವುದೇ ಇದಕ್ಕೆ ಸಾಕ್ಷಿ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಟಿವಿ ರಿಯಾಲಿಟಿ ಷೋಗಳಲ್ಲಿ ಅತ್ತೆ ಸೊಸೆಯರ ನಡುವೆ ಕುಣಿಯುವ ಸ್ಪರ್ಧೆ ಇಡುವ ಕಾರಣ?*

ಮಗ/ಪತಿಯನ್ನು ಯಾರು ಹೆಚ್ಚು ಕುಣಿಸಲು ಸಮರ್ಥರು ಎಂದು ತಿಳಿಯಲು!

ದೇಶವಳ್ಳಿ ಶಿವು, ಸಂತೇಮರಹಳ್ಳಿ

*ಕಾಡ್ಗಿಚ್ಚು, ಹೊಟ್ಟೆಕಿಚ್ಚು ಇವುಗಳಲ್ಲಿ ಹೆಚ್ಚು ಅಪಾಯಕಾರಿ ಯಾವುದು?*

ಹೊಟ್ಟೆಕಿಚ್ಚೇ; ಕಾಡ್ಗಿಚ್ಚು ನ್ಯೂಸ್ ಚಾನಲ್‌ಗೆ ಹೆಚ್ಚೆಂದರೆ ಎರಡು ದಿನದ ಸುದ್ದಿ, ಹೊಟ್ಟೆಕಿಚ್ಚು ಮುಗಿಯದ ಸೀರಿಯಲ್‌ಗಳ ಜೀವಾಳ.

ಎಚ್.ಜಿ. ಜಗದೀಶ್, ಮೈಸೂರು

*ಧರ್ಮಾವರಂ, ಕಾಂಜೀವರಂನಲ್ಲಿ ಮಾತ್ರವಲ್ಲದೆ 'ವಂದೇಮಾತರಂ'ನಲ್ಲೂ 'ರಂ' ಇದೆಯಲ್ಲಾ ರಾಂಜೀ?*

ನಿಜ. ಅದೊಂದೇ ದೇಶಭಕ್ತಿಯ ಕಿಕ್ ಕೊಡುವ ರಂ!

ಪಿ.ಜೆ. ರಾಘವೇಂದ್ರ, ಮೈಸೂರು

*ನಿಮಗೆ ಇಷ್ಟವಾಗುವ, ನಿಮ್ಮಾಕೆಗೆ ಇಷ್ಟವಾಗದ ವಸ್ತು ಯಾವುದು?*

ನನ್ನ ಮುಖ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಪಾಪ ಮಾಡಿದವನು ನರಕಕ್ಕೆ ಹೋಗುತ್ತಾನೆ, ಪುಣ್ಯ ಮಾಡಿದವನು ಸ್ವರ್ಗಕ್ಕೆ ಹೋಗುತ್ತಾನೆ. ಪಾಪ, ಪುಣ್ಯ ಎರಡೂ ಮಾಡಿದವರು?*

ವೃದ್ಧಾಶ್ರಮಕ್ಕೆ.

ಆರತಿ ಘಟಿಕಾರ್, ದುಬೈ

*ಇಲ್ಲೊಬ್ಬ ಹುಡುಗ ತಾನು ಪ್ರೀತಿಸಿದ ಹುಡುಗಿಗೆ ತಾಳಿ ಕಟ್ಟಲು ರೆಡಿ. ಆದರೆ ಅವರಿಬ್ಬರ ಮನೆಯವರೇ ತಾಳಿ ತಾಳಿ ಎನ್ನುತ್ತಿದ್ದಾರೆ. ಏಕಿರಬಹುದು?*

ಸಾಫ್ಟ್‌ವೇರ್‌ನವರಾದ ಇಬ್ಬರಿಗೂ ಸ್ಲಿಪ್ಡ್ ಡಿಸ್ಕ್ ಆಗಿದೆಯಂತೆ; ಎದ್ದು ನಿಲ್ಲುವವರೆಗೆ ತಾಳಿ!

ಅಲ್ಲಾ ಬಕ್ಷ್, ಮಧುಗಿರಿ

*ಹಿಂದುತ್ವ ಎನ್ನುವುದು ಕೇವಲ ಮೇಲ್ಜಾತಿಗೆ ಸೀಮಿತವೇ?*

ಇಲ್ಲ, ಫೀಮೇಲ್ಜಾತಿಗೂ ಅನ್ವಯಿಸುತ್ತದೆ.

ಬುಚ್ಚಿಬಾಬು, ಮಧುಗಿರಿ

*ಗಣೇಶನ ಮುಂದೆ ಕುಡಿದು ಕುಣಿಯುವುದು ಎಷ್ಟು ಮಾತ್ರ ಸರಿ?*

ತಪ್ಪೇನಿಲ್ಲ; ಭಕ್ತಿರಸವನ್ನು ಕುಡಿದು ಭಜನೆ ಮಾಡುತ್ತಾ ಕುಣಿಯಬೇಕಷ್ಟೆ.

ಮಹಾಂತಯ್ಯಾ ಕೆ. ಮಠ, ಬಂದರವಾಡ

*ಸಿಹಿಗೂ, ಕಹಿಗೂ ಇರುವ ವ್ಯತ್ಯಾಸವೇನು?*

ನೋಟ ಕುಡಿಗಣ್ಣಿನದಾದರೆ ಸಿಹಿ, ಕಡೆಗಣ್ಣಿನದಾದರೆ ಕಹಿ.

## ಬಹುಮಾನಿತ ಪ್ರಶ್ನೆ

ಪೇಂಟರ್ ಪಾಪು, ಸಂತೇಮರಹಳ್ಳಿ

*ತಂತ್ರಜ್ಞಾನದಲ್ಲಿ ಮುಂದುವರೆದರೂ ಕೊಳವೆಬಾವಿಯಲ್ಲಿ ಬಿದ್ದ ಮಗುವನ್ನು ಉಳಿಸಲಾಗಲಿಲ್ಲವಲ್ಲ, ಏನು ಪ್ರಯೋಜನ ಹೇಳಿ?*

ಮುಚ್ಚಳ ಮುಚ್ಚಲೂ ಕಂಪ್ಯೂಟರೇ ಬರಬೇಕೇನು? ಬುದ್ಧಿ ಬೆಳೆದಂತೆ ಬೇಜವಾಬ್ದಾರಿಯೂ ಬೆಳೆದರೆ ಬದುಕು ಬರ್ಬರ.

ಎಂ.ವಿ. ವೆಂಕಮ್ಮ, ಬಳ್ಳಾರಿ

*ಹೆಣ್ಣಿಗೂ, ಗಾಳಿಪಟಕ್ಕೂ ಏನು ವ್ಯತ್ಯಾಸ?*

ಹೆಣ್ಣಿಗೆ ದಾರ ಕಟ್ಟಿ ಆಕಾಶಕ್ಕೆ ಕಳುಹಿಸಲು ಯತ್ನಿಸಿದರೆ ಕನಿಷ್ಠ ಮೂರು ವರ್ಷ ಜೈಲುಶಿಕ್ಷೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪಕ್ಷಿಗಳಿಗೆ ಗೂಡು ಕಟ್ಟುವ ಕಲೆ ಕಲಿಸಿದವರು ಯಾರು?*

ಭಯ, ಅವಶ್ಯಕತೆ ಮತ್ತು ಅನುಭವ ಎಂಬ ಮೂವರು ಶ್ರೇಷ್ಠ ಗುರುಗಳು.

ತುರಗಲ್ಲ ಉಮೇಶ, ರಾಮದುರ್ಗ

*ನಮ್ಮ ಮಠದ ಸ್ವಾಮಿಗಳು ಸನ್ಯಾಸತ್ವ ಒಲ್ಲೆ, ಮದುವೆ ಆಗುತ್ತೇನೆ ಎಂದು ಹಠ ಹಿಡಿದಿದ್ದಾರೆ. ಪರಿಹಾರ ಸೂಚಿಸಿ.*



ಹೆಣ್ಣಿನ ಸಂಗ ಮಾಡಿ 'ನಾನು ಗಂಡಸೇ ಅಲ್ಲ' ಎಂದ ಕಳ್ಳ ಸನ್ಯಾಸಿಗಿಂತ ಇವರೇ ಶ್ರೇಷ್ಠರು. ವಾಲಗ ಊದಿಸಿಬಿಡಿ.

ನಳಿನಿ, ಸಕಲೇಶಪುರ

*ಹಗಲಲ್ಲಿ ತುಂಬಾ ನಿದ್ರೆ ಬರ್ತಾ ಇದೆ. ರಾಜಕೀಯಕ್ಕೆ ಸೇರಬಹುದಲ್ಲವೆ?*

ನಿದ್ರೆಯಲ್ಲೂ ಮನೆಹಾಳು ಮಾಡುವ ಸಾಮರ್ಥ್ಯ ಇದ್ದರೆ ಮಾತ್ರ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಈ ರಾಂ ಪಾಲಿನ ಆಂಜನೇಯ ಯಾರು?

ಮಾರುತಿ 800!

■ ರಾಮ್